

# ಕೃಷ್ಣಸುಂದರಿಯ ಹಠ

ಮರಿಯಾ ಶರಪೋವ ಎಂಬ ರಶ್ಯನ್ ಸುಂದರಿಯ ಕನಸು ಮತ್ತೆ ಮುರಿದುಬಿದ್ದಿದೆ. 2004ರ ಬಳಿಕದ ಸತತ 16ನೇ ಹೋರಾಟದಲ್ಲಾದರೂ ಸೆರಿನಾ ವಿಲಿಯಮ್ಸ್‌ಳನ್ನು ಸೋಲಿಸಬೇಕೆಂಬ ಕನಸು ಅದು. ಆದರೆ ಈ ಸಲವೂ ಮರಿಯಾಳನ್ನು ಸೋಲಿಸಿ, ಆಸ್ಟ್ರೇಲಿಯನ್ ಓಪನ್ ಟೆನಿಸ್ ಪ್ರಶಸ್ತಿಯನ್ನು ಸೆರೆನಾಳೇ ಗೆದ್ದುಕೊಂಡಿದ್ದಾಳೆ. ಪಂದ್ಯ ಸೋತ ಬಳಿಕ 'ಈ ಸೆರೆನಾ ನಿವೃತ್ತಿಯಾದ ಬಳಿಕವೇ ನಾನು ಆಡಬೇಕೇನೋ. ಅಥವಾ ನಾನೇ ನಿವೃತ್ತಿ ಆಗುವುದು ಒಳ್ಳೆಯದೇನೋ' ಎಂದು ಮರಿಯಾ ಹತಾಶೆಯಿಂದ ಹೇಳಿದ್ದು ದೊಡ್ಡ ಸುದ್ದಿಯಾಗಿದೆ. ಸೆರೆನಾ ವಿಲಿಯಮ್ಸ್‌ಳ ಮಾನಸಿಕ ದೃಢತೆ ಎಷ್ಟು ಅದ್ಭುತವಾದದ್ದು ಎನ್ನುವುದಕ್ಕೆ ಕಳೆದ ವಾರ ಮರಿಯಾಳನ್ನು ಹಠ ಹಿಡಿದು ಸೋಲಿಸಿದ ಈ ವೈಖರಿಯೇ ಒಂದು ನಿದರ್ಶನ.

ಇದು ಸೆರೆನಾ ವಿಲಿಯಮ್ಸ್ ಗಳಿಸಿದ 19ನೇ ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿ. ಇದರೊಂದಿಗೆ ಆಕೆ ಮಾರ್ಟಿನಾ ನವ್ರಾಟಿಲೋವ ಮತ್ತು ಕ್ರಿಸ್ ಎವರ್ಟ್ ಇಬ್ಬರ ದಾಖಲೆಯನ್ನೂ ಸರಿಗಟ್ಟಿದಂತಾಯಿತು. ಇನ್ನು ದಾಟಲು ಉಳಿದಿರುವುದು ಇಬ್ಬರೇ. 22 ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಗೆದ್ದಿರುವ ಸ್ಟೆಫಿ ಗ್ರಾಫ್ ಮತ್ತು 24 ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಗೆದ್ದಿರುವ ಮಾರ್ಗರೆಟ್ ಕೋರ್ಟ್. ಇವರಲ್ಲಿ ಮಾರ್ಗರೆಟ್ ಕೋರ್ಟ್‌ಳದ್ದು ಓಪನ್ ಯುಗದ ಸಾಧನೆಯಲ್ಲ. ಅಮೆಚೂರ್ ಮತ್ತು ವೃತ್ತಿಪರ ಎರಡೂ ಪ್ರಶಸ್ತಿಗಳ ಒಟ್ಟು ಲೆಕ್ಕವದು. ಸ್ಟೆಫಿ ಗ್ರಾಫ್ ಮಾತ್ರ ಓಪನ್ ಟೆನಿಸ್ ಯುಗದಲ್ಲಿ ಅತ್ಯಧಿಕ ಗ್ರ್ಯಾನ್‌ಸ್ಲಾಮ್‌ಗಳನ್ನು ಗೆದ್ದಾಕೆ. ಸೆರೆನಾ ವಿಲಿಯಮ್ಸ್ ಶೀಘ್ರವೇ ಸ್ಟೆಫಿ ಗ್ರಾಫ್‌ಳ ದಾಖಲೆಯನ್ನು ಮುರಿದಿಕ್ಕಬಹುದೆ... ಎನ್ನುವುದೀಗ ಟೆನಿಸ್ ಜಗತ್ತಿನಲ್ಲಿ ಬಿಸಿ ಚರ್ಚೆಯ ವಿಷಯ.

ಸೆರೆನಾಳಿಗೀಗ 33 ವರ್ಷ. ಸ್ಟೆಫಿ 22 ಗ್ರ್ಯಾನ್‌ಸ್ಲಾಮ್‌ಗಳನ್ನು ಗೆದ್ದಾಗ ಆಕೆಗಿನ್ನೂ 30ರ ಹರೆಯ. 30 ದಾಟಿದ ಬಳಿಕ ಟೆನಿಸ್‌ನಲ್ಲಿ ಚಾಂಪಿಯನ್ ಆಗುವುದು ನಿಜಕ್ಕೂ ಕಷ್ಟ. ವಯಸ್ಸು ಕೈಕೊಡುತ್ತದೆ. ಆದರೆ ಮೊನ್ನೆ ಆಸ್ಟ್ರೇಲಿಯನ್ ಓಪನ್‌ನಲ್ಲಿ ಸೆರೆನಾಳ ಸರ್ವ್‌ಗಳನ್ನು ನೆಲಕ್ಕೆ ಕುಕ್ಕುವ ಶೈಲಿ ಮತ್ತು ಏಕಾಗ್ರತೆಯನ್ನು ಗಮನಿಸಿದ ಅಭಿಮಾನಿಗಳಿಗೆ ಸ್ಟೆಫಿಯ ದಾಖಲೆ ಶೀಘ್ರವೇ ನೆಲ ಕಚ್ಚುವ ಬಗ್ಗೆ ಯಾವುದೇ ಅನುಮಾನ ಉಳಿದಿಲ್ಲ. 2016ರ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಸೆರೆನಾ ಈಗಾಗಲೆ ಸಿದ್ಧತೆ ನಡೆಸಿದ್ದಾಳೆ. ಅಷ್ಟರೊಳಗೆ ಇನ್ನೂ ಆರು ಸಿಂಗಲ್ಸ್ ಗ್ರ್ಯಾನ್‌ಸ್ಲಾಮ್‌ಗಳು ಬರುವುದು ಖಚಿತ. ಇವುಗಳಲ್ಲಿ ಮೂರು ಗೆಲ್ಲುವುದು ಅಷ್ಟು ಕಷ್ಟದ ಕೆಲಸವಲ್ಲ.

ಹಾಗೆಂದು ಇನ್ನೂ 2 ವರ್ಷಗಳ ಕಾಲ ಆಡುವ ಸಾಮರ್ಥ್ಯ ಸೆರೆನಾ ವಿಲಿಯಮ್ಸ್‌ಗೆ ಇದೆ ಎಂದು ಖಚಿತವಾಗಿ ಹೇಳಲು ಸಾಧ್ಯವೆ? ಈಕೆಯ ಟೆನಿಸ್ ವೃತ್ತಿ ಜೀವನವನ್ನು ಗಮನಿಸಿದರೆ, ಉದ್ದಕ್ಕೂ ಗಾಯಗಳೊಂದಿಗೆ ನಡೆಸಿದ ಹೋರಾಟವೇ ಎದ್ದು ಕಾಣುತ್ತದೆ. 2005-08ರ ಅವಧಿಯಲ್ಲಿ ಸೆರೆನಾ ಎಷ್ಟೊಂದು ಗಾಯಗಳನ್ನು, ಸ್ನಾಯು ಸೆಳೆತಗಳನ್ನು ಮಾಡಿಕೊಂಡಳೆಂದರೆ, 14 ಗ್ರ್ಯಾನ್‌ಸ್ಲಾಮ್‌ಗಳಲ್ಲಿ ಒಂದನ್ನು ಮಾತ್ರ ಗೆಲ್ಲಲು ಸಾಧ್ಯವಾಯಿತು. 2009ರಲ್ಲಿ ಫೀನಿಕ್ಸ್‌ನಂತೆ ಮೇಲೆದ್ದ ಆಕೆ, 2010ರಲ್ಲಿ ಮತ್ತೆ ಗಾಯ, ಡಿಪ್ರೆಶನ್ ಅಂತ ಮಂಕಾದಳು. ಕಳೆದ ಮೂರು ವರ್ಷಗಳಲ್ಲಿ ಪುನಃ ನಾಗಾಲೋಟ. ಸದ್ಯಕ್ಕಂತೂ ದೊಡ್ಡ ಗಾಯದ ಸಮಸ್ಯೆಗಳು ಕಾಣಿಸುತ್ತಿಲ್ಲ. ಆದರೆ ಯಾವುದೇ ಆಟದಲ್ಲಿ ಗಾಯದ ಸಮಸ್ಯೆಯನ್ನು ಹೀಗೇ ಎಂದು ಹೇಳುವಂತಿಲ್ಲ.

ಹಾಗೆ ನೋಡಿದರೆ ಸೆರೆನಾ, ಟೆನಿಸ್‌ನಲ್ಲಿ ಅತ್ಯಂತ ವೇಗದ ಸರ್ವ್‌ಗಾರ್ತಿಯಲ್ಲ. 2013ರಲ್ಲಿ ಗಂಟೆಗೆ 207 ಕಿ.ಮೀ ವೇಗದಲ್ಲಿ ಸರ್ವ್ ಮಾಡಿದ್ದು ಈಕೆಯ ಗರಿಷ್ಠ ವೇಗದ ದಾಖಲೆ. 2007ರಲ್ಲಿ ಈಕೆಯ ಅಕ್ಕ ವೀನಸ್ ವಿಲಿಯಮ್ಸ್ 207.9 ಕಿ.ಮೀ ವೇಗದಲ್ಲಿ ಸರ್ವ್ ಮಾಡಿದ್ದಳು. ಕಳೆದ ವರ್ಷ ಸಬೀನ್ ಲಿಸಿಕಿ ಗಂಟೆಗೆ 210.8 ಕಿ.ಮೀ ವೇಗದಲ್ಲಿ ಸರ್ವ್ ಮಾಡಿ ಹೊಸ ದಾಖಲೆ ಬರೆದಿದ್ದಾಳೆ. ಆದರೆ ಸೆರೆನಾಳ ಹೆಗ್ಗಳಿಕೆಯೆಂದರೆ, ವೇಗದ ಜತೆಗೆ ಸ್ಪಿಂಗ್‌ಗಳುಳ್ಳ ಹೊಡೆತಗಳನ್ನು ನೀಡುವುದು. ಈಕೆಯ ಬ್ಯಾಕ್‌ಹ್ಯಾಂಡ್ ಮತ್ತು ಫೋರ್‌ಹ್ಯಾಂಡ್ ಎರಡೂ ಹೊಡೆತಗಳು ವೇಗದ್ದೇ. ಏಸ್‌ಗಳನ್ನು ಸತತವಾಗಿ ಎತ್ತಿಹಾಕುವ ಶೈಲಿಯೂ ಬೆರಗು ಹುಟ್ಟಿಸುವಂಥದ್ದು. ಒಂದೊಮ್ಮೆ ಸತತ ಮೂರು ಏಸ್‌ಗಳನ್ನು ಹಾಕಿ ಇಡೀ ಟೆನಿಸ್ ಲೋಕವನ್ನೇ ಬೆರಗು ಮಾಡಿದ್ದುಂಟು.

ಎಲ್ಲಕ್ಕಿಂತ ಮುಖ್ಯವೆಂದರೆ ಇನ್ನೇನು ಸೆಟ್ ಸೋಲುತ್ತಾಳೆ ಎಂದುಕೊಂಡ ಕ್ಷಣದಲ್ಲಿ ಅದ್ಭುತ ವೇಗದೊಂದಿಗೆ ಮರಳಿ ಪುಟಿಯುವ ಈಕೆಯ ತಾಖತ್ತು. 2003 ಮತ್ತು 2005ರ ಆಸ್ಟ್ರೇಲಿಯನ್ ಓಪನ್‌ನಲ್ಲಿ ಆಶ್ಚರ್ಯಕರವಾಗಿ ಸೋಲಿನ ಸುಳಿಯಿಂದ ಮೇಲೆದ್ದು ಗೆದ್ದದ್ದು ಹಾಗೂ 2009ರ ವಿಂಬಲ್ಡನ್‌ನಲ್ಲಿ ಮ್ಯಾಚ್ ಪಾಯಿಂಟ್‌ನಲ್ಲಿ ತಿರುಗಿಬಿದ್ದು ಎದುರಾಳಿಯನ್ನು ಬಗ್ಗುಬಡಿದದ್ದು ಈಗಲೂ ಟೆನಿಸ್‌ಪ್ರೇಮಿಗಳು ನೆನಪಿಸಿಕೊಳ್ಳುವ ಇತಿಹಾಸ.

ಏಕಕಾಲಕ್ಕೆ (2002-03) ಐದು ಗ್ರ್ಯಾನ್‌ಪ್ರಿ ಪ್ರಶಸ್ತಿಗಳನ್ನು ಹೊಂದಿದ ಏಕೈಕ ಮಹಿಳೆಯೀಕೆ. 13 ಗ್ರ್ಯಾನ್‌ಸ್ಲಾಮ್ ಡಬಲ್ಸ್ ಮತ್ತು 2 ಮಿಕ್ಸೆಡ್ ಡಬಲ್ಸ್ ಸೇರಿಸಿದರೆ ಈಕೆಯ ಖಾತೆಯಲ್ಲೀಗ ಒಟ್ಟು 34 ಗ್ರ್ಯಾನ್‌ಸ್ಲಾಮ್‌ಗಳಿವೆ. ಸ್ಟೆಫಿ, ಕ್ರಿಸ್ ಎವರ್ಟ್ ಮತ್ತು ಮಾರ್ಟಿನಾ ಬಳಿಕದ ನಾಲ್ಕನೇ ಸ್ಥಾನವದು. ಕೋಚ್ ಪ್ಯಾಟ್ರಿಕ್ ಮೋರಟಾಗ್ಲೊ ಈಕೆಯ ಪ್ರಿಯಕರನೂ ಹೌದಂತೆ. 'ಯೆಹೋವನ ಸಾಕ್ಷಿಗಳು' ಗುಂಪಿನ ಕಟ್ಟಾ ಅನುಯಾಯಿಯಾಗಿರುವ ಈ ಅಮೆರಿಕನ್ ಕೃಷ್ಣ ಸುಂದರಿ, ಜಗತ್ತಿನಲ್ಲೇ ಅತ್ಯಂತ ಹೆಚ್ಚು ಬಹುಮಾನ ಮೊತ್ತ (60 ದಶಲಕ್ಷ ಡಾಲರ್) ಗೆದ್ದಿರುವ ಮಹಿಳಾ ಕ್ರೀಡಾಳು. ತನ್ನ ಹೆಸರನ್ನೇ ತಿರುಗಿಸಿ ಬರೆದು 'ಅನೆರೆಸ್' ಎಂಬ ಸ್ವಂತ ಉಡುಪಿನ ಬ್ರ್ಯಾಂಡನ್ನು ಹೊಂದಿರುವ ಈಕೆ, ನೈಕ್ ಕಂಪೆನಿಯ ಜಾಹೀರಾತಿಗೆ ಕಳೆದ ವರ್ಷ 40 ದಶಲಕ್ಷ ಡಾಲರ್ ಒಪ್ಪಂದಕ್ಕೆ ಸಹಿ ಹಾಕಿದವಳು. 'ಒಂದು ಮಗು ಹೆರಬೇಕು' ಎಂದು ವರ್ಷದ ಹಿಂದೆಯೇ ಹೇಳಿಕೊಂಡಿದ್ದರೂ, ಸ್ಟೆಫಿಯನ್ನು ಹಿಂದಿಕ್ಕುವ ಹಠದಿಂದ ಆ ಆಸೆಯನ್ನೂ ಹತ್ತಿಕ್ಕಿಕೊಂಡವಳು. ಇನ್ನೇನು ಮೇ ತಿಂಗಳಲ್ಲಿ ಫ್ರೆಂಚ್ ಓಪನ್ ನಡೆಯಲಿದೆ. ಸದ್ಯಕ್ಕಂತೂ ಈಕೆಯನ್ನು ಸೋಲಿಸುವವರು ಯಾರೂ ಕಾಣುತ್ತಿಲ್ಲ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65